ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

## ಪತ್ರಿಕಾ ತುಣುಕುಗಳು
## PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಚುನಾವಣಾ ಆಯೋಗ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ    ದಿನಾಂಕ : DATE: 26/1/21

# ಆ್ಯಪ್‌ನಲ್ಲೇ ಸಿಗಲಿದೆ ಡಿಜಿಟಲ್ ಗುರುತಿನ ಚೀಟಿ

## ಎಪಿಕ್ ಕಾರ್ಡ್ ಚುನಾವಣೆಗೆ ಮಾತ್ರ ಬಳಕೆ ಆಗಬೇಕು: ಮುಖ್ಯ ಚುನಾವಣಾಧಿಕಾರಿ

**ವಿಕ ಸುದ್ದಿಲೋಕ** ಬೆಂಗಳೂರು

ಕೇಂದ್ರ ಚುನಾವಣಾ ಆಯೋಗವು ಬಿಡುಗಡೆ ಮಾಡಿರುವ ನೂತನ ಆ್ಯಪ್ ಮೂಲಕ ಸಾರ್ವಜನಿಕರೇ ನೇರವಾಗಿ ಡಿಜಿಟಲ್ ಗುರುತಿನ ಚೀಟಿಯನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಡಾ. ಸಂಜೀವ್‌ಕುಮಾರ್ ಹೇಳಿದರು.

### 18 ವರ್ಷ ತುಂಬಿದವರನ್ನು ಪಟ್ಟಿಗೆ ಸೇರಿಸುವ ಗುರಿ

ಪುರಭವನದಲ್ಲಿ ಹಮ್ಮಿಕೊಂಡಿದ್ದ 'ರಾಷ್ಟ್ರೀಯ ಮತದಾರರ ದಿನ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ''ಮತದಾರರ ಗುರುತಿನ ಚೀಟಿ ಚುನಾವಣೆಗೆ ಮಾತ್ರ ಬಳಕೆ ಆಗಬೇಕು. ಆದರೆ ಬೇರೆ ದಾಖಲೆಗಳಿಗೂ ಇದನ್ನು ಬಳಸುತ್ತಿದ್ದಾರೆ. ಅದು ತಪ್ಪು'' ಎಂದು ಹೇಳಿದರು.

''ಮುಂದಿನ ದಿನಗಳಲ್ಲಿ ಎಪಿಕ್ ಕಾರ್ಡ್‌ಗಳು ಚುನಾವಣೆಗೆ ಮಾತ್ರ ಬಳಕೆಯಾಗುವಂತೆ ಕಾನೂನು ತರಲಾಗುವುದು. 18 ವರ್ಷ ತುಂಬಿದವರು ಮತದಾರರ ಪಟ್ಟಿಯಲ್ಲಿ ಸೇರ್ಪಡೆಯಾಗುವುದು ಚುನಾವಣಾ ಆಯೋಗದ ಗುರಿಯಾಗಿದೆ. ಅದಕ್ಕಾಗಿ ಹಲವು ಹೊಸ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಎಲ್ಲರೂ ಮತದಾರರ ಪಟ್ಟಿಗೆ ಸೇರ್ಪಡೆಯಾಗಲು ಪ್ರೇರೇಪಣೆ ನೀಡಲಾಗುತ್ತಿದೆ'' ಎಂದರು.

ಸರಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಮಾತನಾಡಿ, ''ರಾಷ್ಟ್ರೀಯ ಮತದಾರರ ದಿನದ ಅಂಗವಾಗಿ ಹೊಸಬರಿಗೆ ಮತದಾರರ ಗುರುತಿನ ಚೀಟಿ, ಚುನಾವಣೆಗೆ ಸೇವೆ ಸಲ್ಲಿಸಿದವರಿಗೆ ಪ್ರಶಸ್ತಿ ವಿತರಣೆ ಮಾಡಲಾಗಿದೆ. ಚುನಾವಣಾ ಪ್ರಕ್ರಿಯೆ ಬಹಳ ಕಠಿಣವಾಗಿದೆ. ಹಿಂದೆ 21 ವರ್ಷ ತುಂಬಿದವರಿಗೆ ಮತದಾರರ ಗುರುತಿನ ಚೀಟಿ ನೀಡಲಾಗುತ್ತಿತ್ತು. ಈಗ 18 ವರ್ಷ ತುಂಬಿದವರಿಗೆ ಮತದಾರರ ಗುರುತಿನ ಚೀಟಿ ನೀಡಲಾಗುತ್ತಿದೆ'' ಎಂದರು.

''ಚುನಾವಣೆ ಬಗ್ಗೆ ಯಾರೂ ಹೆಚ್ಚು ಗಮನಹರಿಸುತ್ತಿಲ್ಲ. ಹಕ್ಕು ಬಂದಾಗ ನಿಮ್ಮ ಹಕ್ಕನ್ನು ಸರಿಯಾಗಿ ಚಲಾಯಿಸಬೇಕು. ಯುವ ಪೀಳಿಗೆಗೆ ಮತದಾನ ಮಾಡುವ ಬಗ್ಗೆ ಹೆಚ್ಚು ಅರಿವು ಮೂಡಿಸಬೇಕು. ಮತದಾನ ಪ್ರಕ್ರಿಯೆಯಲ್ಲಿ ಯುವಕರ ಪಾತ್ರ ಬಹಳ ಪ್ರಾಮುಖ್ಯವಾಗಿದೆ. ಪ್ರಜಾಪ್ರಭುತ್ವದಲ್ಲಿ ಎಲ್ಲರೂ ಮತದಾನ ಮಾಡಬೇಕು'' ಎಂದು ಹೇಳಿದರು.

ನಿವೃತ್ತ ಐಎಎಸ್ ಅಧಿಕಾರಿ ಶ್ರೀ ವಸ್ತ್ರದ್, ಪಾಲಿಕೆ ವಿಶೇಷ ಆಯುಕ್ತ (ಆಡಳಿತ) ಜೆ. ಮಂಜುನಾಥ್ ಮತ್ತಿತರರಿದ್ದರು.




ಪುರಭವನದಲ್ಲಿ ಸಾಂಕೇತಿಕವಾಗಿ ಡಿಜಿಟಲ್ ಗುರುತಿನ ಪತ್ರ ವಿತರಿಸಲಾಯಿತು.

### ಇವಿಎಂ ಬಗ್ಗೆ ತಪ್ಪು ಕಲ್ಪನೆ ಬೇಡ

''20 ವರ್ಷಗಳಿಂದ ಇವಿಎಂಗಳನ್ನು ಬಳಕೆ ಮಾಡಲಾಗುತ್ತಿದೆ. ಆದರೆ, ಜನರಲ್ಲಿ ಇವಿಎಂಗಳ ಬಗ್ಗೆ ಕೆಲ ಅನುಮಾನಗಳಿವೆ. ಇವಿಎಂಗಳ ಬಗ್ಗೆ ಇರುವ ಊಹಾಪೋಹಗಳು ಸರಿಯಲ್ಲ. ಅದರಲ್ಲಿರುವ ಮಾಹಿತಿಯನ್ನು ತಿರುಚಲು ಆಗುವುದಿಲ್ಲ. ಭಾರತದಲ್ಲಿ ಇವಿಎಂ ಸರಿಯಾಗಿದ್ದು, ಆ ಬಗ್ಗೆ ಎಲ್ಲರಲ್ಲೂ ಅರಿವು ಮೂಡಿಸಬೇಕು. ತಪ್ಪು ಮಾಹಿತಿ ಯಾರೂ ನೀಡಬಾರದು'' ಎಂದು ಸಂಜೀವ್‌ಕುಮಾರ್ ತಿಳಿಸಿದರು. ಇದೇ ವೇಳೆ ಬಿಬಿಎಂಪಿ ಆಯುಕ್ತರು ಹಾಗೂ ಜಿಲ್ಲಾ ಚುನಾವಣಾಧಿಕಾರಿಯಾಗಿರುವ ಎನ್. ಮಂಜುನಾಥ್ ಪ್ರಸಾದ್ ಅವರಿಗೆ 2021ನೇ ಸಾಲಿನ ರಾಜ್ಯ ಮಟ್ಟದ ಚುನಾವಣಾ ಪ್ರಶಸ್ತಿ ನೀಡಿ ಗೌರವಿಸಲಾಯಿತು.

### ಸಹಾಯವಾಣಿ 1950

ಮತದಾರರ ಸಮಸ್ಯೆಗಳನ್ನು ಆಲಿಸಲು 1950 ಸಹಾಯವಾಣಿ ಸಂಖ್ಯೆಗೆ ಶುಲ್ಕ ರಹಿತ ಕರೆ ಮಾಡಿ ಮಾಹಿತಿ ಪಡೆಯಬಹುದಾಗಿದೆ.

### ನಿಮಗಿದು ಗೊತ್ತೇ?

ಬಿಬಿಎಂಪಿ ವ್ಯಾಪ್ತಿಯ 28 ವಿಧಾನಸಭಾ ಕ್ಷೇತ್ರಗಳ ಪೈಕಿ 1.30 ಕೋಟಿ ಜನಸಂಖ್ಯೆಯಿದ್ದು, 93,75,000 ಮತದಾರರಿದ್ದಾರೆ. ಮತದಾನ ಮಾಡಲು 8,500 ಮತಗಟ್ಟೆಗಳಿವೆ.

### ನೀತಿಸಂಹಿತೆ ಉಲ್ಲಂಘನೆಗೆ ಸಿ-ವಿಜಿಲ್ ತಂತ್ರಾಂಶ

ಚುನಾವಣೆ ವೇಳೆ ನೀತಿಸಂಹಿತೆ ಉಲ್ಲಂಘನೆ ತಡೆಯುವ ಸಂಬಂಧ ಸಿ-ವಿಜಿಲ್ ತಂತ್ರಾಂಶ ಸಿದ್ಧಪಡಿಸಲಾಗಿದ್ದು, ಯಾರಾದರೂ ನೀತಿಸಂಹಿತೆ ಉಲ್ಲಂಘನೆ ಮಾಡುವುದು ಕಂಡುಬಂದಲ್ಲಿ ನಾಗರಿಕರು ಛಾಯಾಚಿತ್ರ, ಧ್ವನಿ, ದೃಶ್ಯಾವಳಿ ಮೂಲಕ ಕಳುಹಿಸಬಹುದು. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ತಪ್ಪಿತಸ್ಥರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಿದ್ದಾರೆ.